## ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ : 3900 / 2023

ಪಿರ್ಯಾದುದಾರರು : ಮಾಗಡಿ ಪೋಲಿಸ್ ಠಾಣೆ

**ವಿರುದ್ಧ**

**ಆರೋಪಿ : ನಿಂಗಯ್ಯ ಬಿನ್ ಚಿಕ್ಕಬಸವಯ್ಯ**
**65 ವರ್ಷಗಳು,**
**ಉಡುವೆಗೆರೆ ಗ್ರಾಮ, ಮಾಡಬಾಳ್ ಹೋಬಳಿ**
**ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ.**

### ಕಲಂ-313 ದಂಡ ಪ್ರಕ್ರಿಯಾ ಸಂಹಿತೆ ಅಡಿ ಆರೋಪಿತನ ಹೇಳಿಕೆ

**ಪ್ರಶ್ನೆ-1 :** ಈ ಪ್ರಕರಣದಲ್ಲಿ ನುಡಿದಿರುವ ಸಾಕ್ಷಿಗಳ ಹೇಳಿಕೆಗಳನ್ನು ಕೇಳಿ ತಿಳಿದುಕೊಂಡಿರುತ್ತೀರಾ?

**ಆರೋಪಿ ಉತ್ತರ :**

**ಪ್ರಶ್ನೆ-2 :** ಪ್ರಾಸಾ-**01 :** ಕೆಂಪಮ್ಮ ರವರು ತಮ್ಮ ಸಾಕ್ಷ್ಯದಲ್ಲಿ ಈಗ್ಗೆ 1 ವರ್ಷದ ಹಿಂದೆ ತಾನು 11.00 – 12.00 ಗಂಟೆ ಸಮಾರಿಗೆ ಹೊಲದ ಹತ್ತಿರ ಆಡನ್ನು ಮೇಹಿಸುತ್ತಾ ತಾನು ಮತ್ತು ತನ್ನ ಮೊಮ್ಮಕ್ಕಳು ಕೂತಿದ್ದೆವು. ಆಗ ಆರೋಪಿಯು ಬಂದು ಸದರಿ ಆಡುಗುಳು ಯಾರವು ಆಚೆ ಹೊಡೆಯಿರಿ ಎಂದು ಹೇಳಿದನು. ಆಗ ತಾನು ಆರೋಪಿಗೆ ಫಲ ಆಗಿರುವ ಹಸುವನ್ನು ಹೊಡೆಯಬೇಡ ಎಂದು ಹೇಳಿದೆನು. ಆಗ ಆರೋಪಿಯು ಅವಾಚ್ಯ ಶಬ್ದಗಳಿಂದ ಬೈಯ್ದಿರುತ್ತಾರೆ. ಆಗ ತಾನು ತಮ್ಮ ಭಾಗ ತಮಗೆ ಕೊಟ್ಟರೆ ಏಕೆ ಬರುತ್ತೇವೆ ಎಂದು ಹೇಳಿದೆನು ಎಂದು ಸಾಕ್ಷಿ ನುಡಿದಿದ್ದು ಈ ಬಗ್ಗೆ ನೀವು ಏನು ಹೇಳುವಿರಿ?

**ಆರೋಪಿ ಉತ್ತರ :**

**ಪ್ರಶ್ನೆ-3 :** ಪ್ರಾಸಾ-**01 ರವರು ಮುಂದುವರೆದು** ತಮ್ಮ ಸಾಕ್ಷ್ಯದಲ್ಲಿ ಆಗಆರೋಪಿಯು ನಿನಗೆ ಏನು ಕೊಡಬೇಕಾಗಿರುವುದು ಎಂದು ಹೇಳಿದನು, ತಾನು ಆಗೆ ಮಾತನಾಡಬೇಡ ಎಂದು ಹೇಳಿದೆನು, ಆಗ ಆರೋಪಿಯು ತನಗೆ ಸಿಕ್ಕಾಪಟ್ಟೆ ಹಲ್ಲೆ ಮಾಡಿದ್ದು ದೊಣ್ಣೆಯಿಂದ ತಲೆಗೆ ಮತ್ತು ಬೆನ್ನಿಗೆ ಹಲ್ಲೆ ಮಾಡಿರುತ್ತಾನೆ. ಆರೋಪಿಯು ಹಲ್ಲೆ ಮಾಡಿದ್ದರಿಂದ ತಾನು ಮೂರ್ಛೆ ಹೋದೆನು. ಆಗ ಚಾಸಾ-2 ರವರು ಬಿಡಿಸಲು ಬಂದಿರುತ್ತಾರೆ. ಆಗ ಆರೋಪಿಯು ಚಾಸಾ-2ರವರಿಗೂ ದೊಣ್ಣೆಯಿಂದ ಹಲ್ಲೆ ಮಾಡಿರುತ್ತಾರೆ. ಆರೋಪಿಯು ಮುಂಡೆ ನೀನು ಸಾಯಿ ಎಂದು ಹಲ್ಲೆ ಮಾಡುತ್ತಿದ್ದನು, ತಾನು ಮೂರ್ಛೆ ಹೋಗಿದ್ದರಿಂದ ತನ್ನನ್ನು ಮಾಗಡಿಯ ಸರ್ಕಾರಿ ಆಸ್ಪತ್ರೆಗೆ ತಂದು

ಸೇರಿಸಿದ್ದರು. ಆಸ್ಪತ್ರೆಯಲ್ಲಿ ಪೋಲಿಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದು ಸಾಕ್ಷಿ ನುಡಿದಿದ್ದು ಈ ಬಗ್ಗೆ ನೀವು ಏನು ಹೇಳುವಿರಿ?

**ಆರೋಪಿ ಉತ್ತರ :**

**ಪ್ರಶ್ನೆ-4 :** ಪ್ರಾಸಾ-**02 : ಗೌರಮ್ಮ ರವರು** ತಮ್ಮ ಸಾಕ್ಷ್ಯದಲ್ಲಿ ದಿನಾಂಕ 06.06.2023 ರಂದು ಬೆಳಿಗ್ಗೆ 10.00 – 10.30 ಗಂಟೆ ಸಮಯದಲ್ಲಿ ಚಾಸಾ-1 ಮತ್ತು ಚಾಸಾ-3 ಹಾಗೂ 4 ರವರು ಆಡನ್ನು ಹೊಡೆದುಕೊಂಡು ಹೊಲದ ಹತ್ತಿರ ಹೋದ ನಂತರ ತಾನು ಹಸುಗಳನ್ನು ಹೊಡೆದುಕೊಂಡು ಹೋಗಿರುತ್ತೇನೆ. ತಾನು ಹೋಗುವಷ್ಟೊತ್ತಿಗೆ ಗಲಾಟೆ ಆಗುತ್ತಿತ್ತು. ಚಾಸಾ-3 ಮತ್ತು 4 ರವರು ಏನೆ ತಮ್ಮ ಅಜ್ಜಿಗೆ ಹೊಡೆಯುತ್ತಿದ್ದೀಯಾ ಎಂದು ಕೇಳುತ್ತಿದ್ದರು. ಆಗ ಆರೋಪಿಯು ಅವರಿಗೂ ಕಲ್ಲು ತೆಗೆದುಕೊಂಡು ಹೊಡೆಯಲು ಓಡಿಸಿಕೊಂಡು ಹೋಗಿರುತ್ತಾರೆ ಹಾಗೂ ಬಾಯಿಗೆ ಬಂದಹಾಗೆ ಅವಾಚ್ಯ ಶಬ್ದಗಳಿಂದ ಬೈಯ್ದಿರುತ್ತಾರೆ ಎಂದು ಸಾಕ್ಷಿ ನುಡಿದಿದ್ದು ಈ ಬಗ್ಗೆ ನೀವು ಏನು ಹೇಳುವಿರಿ?

**ಆರೋಪಿ ಉತ್ತರ :**

**ಪ್ರಶ್ನೆ-5 : ಪ್ರಾಸಾ-02 ರವರು ಮುಂದುವರೆದು** ತಮ್ಮ ಸಾಕ್ಷ್ಯದಲ್ಲಿ ಆಗ ತಾನು ಆರೋಪಿಗೆ ಚಾಸಾ-1 ರವರಿಗೆ ಏಕೆ ಹಲ್ಲೆ ಮಾಡುತ್ತಿದ್ದಿಯಾ ತಾವು ಹಸುವನ್ನು ಮೇಯಿಸುತ್ತಿ**ದ್ದೇವೆ** ಎಂದು ಹೇಳಿದ್ದಕ್ಕೆ ಆರೋಪಿಯು ನಿಮ್ಮದು ಏನೂ ಇರುವುದಿಲ್ಲ ನೀನು ಏಕೆ ಹಸುವನ್ನು ತಂದಿದ್ದೀಯಾ ತೆಗೆದುಕೊಂಡು ಆಚೆ ಹೋಗು ಎಂದು ಫಲ ಕೊಡುವ ಹಸುವಿಗೆ ದೊಣ್ಣೆಯಿಂದ ಹೊಡೆದಿರುತ್ತಾರೆ. ಆಗ ಚಾಸ-1 ರವರು ತಮಗೆ ಭಾಗ ಕೊಟ್ಟಿದ್ದರೆ ತಾವು ಏಕೆ ಬರುತ್ತಿದ್ದೆವು ಎಂದು ಹೇಳಿರುತ್ತಾರೆ. ಆಗ ಆರೋಪಿಯು ಚಾಸಾ-1 ರವರಿಗೆ ನಿನ್ನದು ಯಾವುದೂ ಇಲ್ಲ ಎಲ್ಲಾ ಎತ್ತಿಕೊಂಡು ಹೋಗು ಎಂದು ಹೇಳಿದ್ದರು. ಆರೋಪಿಯು ಚಾಸಾ-1ರವರ ತಲೆಗೆ ಮತ್ತು ಮೈಗೆ ದೊಣ್ಣೆಯಿಂದ ಸಿಕ್ಕಾಪಟ್ಟೆ ಹಲ್ಲೆ ಮಾಡಿರುತ್ತಾರೆ. ಆಗ ಬಿಡಿಸಲುಹೋದ ತನಗೂ ಆರೋಪಿಯು ದೊಣ್ಣೆಯಿಂದ ತಲೆಗೆ, ಮೈಕೈಗೆ ಹಲ್ಲೆ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿದಿದ್ದು ಈ ಬಗ್ಗೆ ನೀವು ಏನು ಹೇಳುವಿರಿ?

**ಆರೋಪಿ ಉತ್ತರ :**

**ಪ್ರಶ್ನೆ-6 :** ಪ್ರಾಸಾ-**02 ರವರು ಮುಂದುವರೆದು** ತಮ್ಮ ಸಾಕ್ಷ್ಯದಲ್ಲಿ ಚಾಸಾ-1 ರವರು ಏಕೆ ಹಲ್ಲೆ ಮಾಡುತ್ತೀಯೆಂದು ಕೇಳಿದಾಗ ಆರೋಪಿಯು ನೀನು ಸತ್ತು ಹೋದರೆ ತಮಗೆ ನೆಮ್ಮದಿ ಎಂದು ಹೇಳಿದ್ದರು. ಚಾಸಾ-3ಮತ್ತು4ರವರು ತನ್ನ ತಾಯಿಯವರಿಗೆ ಹಲ್ಲೆ ಮಾಡಬೇಡಿ ಎಂದು ಜೋರಾಗಿ ಕಿರುಚಿರುತ್ತಾರೆ. ಆಗ ರೋಡಿನಲ್ಲಿ ಇದ್ದವರು ಬಂದಾಗ ಆರೋಪಿಯು ದೊಣ್ಣೆಯನ್ನು ಎಸೆದು ಓಡಿ ಹೋಗಿರುತ್ತಾರೆ. ಆಗ ಯಾರೋ ತನ್ನನ್ನು ಹಾಗೂ ಚಾಸ-1, 3 ಮತ್ತು 4 ರವರನ್ನು ಆಟೋದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆಂದು ಸಾಕ್ಷಿ ನುಡಿದಿದ್ದು ಈ ಬಗ್ಗೆ ನೀವೇನು ಹೇಳುವಿರಿ?

**ಆರೋಪಿ ಉತ್ತರ :**

**ಪ್ರಶ್ನೆ-7 : ಪ್ರಾಸಾ-02 ರವರು ಮುಂದುವರೆದು** ತಮ್ಮ ಸಾಕ್ಷ್ಯದಲ್ಲಿ ದಿನಾಂಕ 06.06.2023 ರಂದು ಗಲಾಟೆ ಆಗಿದ್ದು ದಿನಾಂಕ 09.06.2023 ರಂದು ಮಹಜರನ್ನು ಜರುಗಿಸಿರುತ್ತಾರೆ, ಮಹಜರು ಸಮಯದಲ್ಲಿ ತಾನು, ಚಾಸಾ-5 ಮತ್ತು ಚಾಸಾ-8 ರವರು ಇದ್ದೆವು. ಮಹಜರನ್ನು ಸರ್ವೆ ನಂ.129 ರ ಜಮೀನಿನಲ್ಲಿ ಬೆಳಿಗ್ಗೆ 11.00 ರಿಂದ 12.00 ಗಂಟೆಯವರೆಗೆ ಜರುಗಿಸಿರುತ್ತಾರೆ. ಮಹಜರ್ ಸಮಯದಲ್ಲಿ ದೊಣ್ಣೆಯನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದು ಸಾಕ್ಷಿ ನುಡಿದಿದ್ದು ಈ ಬಗ್ಗೆ ನೀವು ಏನು ಹೇಳುವಿರಿ?

**ಆರೋಪಿ ಉತ್ತರ :**

**ಪ್ರಶ್ನೆ-8 :** ಪ್ರಾಸಾ-**03 :** ನವಾಜ್ ರವರು ತಮ್ಮ ಸಾಕ್ಷ್ಯದಲ್ಲಿ ಸುಮಾರು 2 ವರ್ಷಗಳ ಹಿಂದೆ ಸುಮಾರು 11.00 ಗಂಟೆ ಸಮಯದಲ್ಲಿ ಜಮೀನಿನ ವಿಚಾರದಲ್ಲಿ ಗೌರಮ್ಮ ಮತ್ತು ನಿಂಗಯ್ಯ ರವರ ನಡುವೆ ಜಗಳ ಆಗಿರುವ ಸಂಬಂಧ ಪೋಲಿಸರು ಬಂದು ತನಿಖೆಯನ್ನು ಮಾಡಿ ದೊಣ್ಣೆಯನ್ನು ಜಪ್ತಿ ಪಡಿಸಿಕೊಂಡು ಸಹಿಯನ್ನು ಪಡೆದಿರುತ್ತಾರೆ, ಆ ಸಮಯದಲ್ಲಿ ಚಾಸಾ 2 ಮತ್ತು 6 ರವರು ಇದ್ದರು ಎಂದು ಸಾಕ್ಷಿ ನುಡಿದಿದ್ದು ಈ ಬಗ್ಗೆ ನೀವು ಏನು ಹೇಳುವಿರಿ?

**ಆರೋಪಿ ಉತ್ತರ :**

**ಪ್ರಶ್ನೆ-9 :** ಪ್ರಾಸಾ-**04 : ಮಹದೇವ ರವರು** ತಮ್ಮ ಸಾಕ್ಷ್ಯದಲ್ಲಿ ತಾನು ಉಡುವೆಗೆ ಗ್ರಾಮದ ಸರ್ವೆ ನಂ.129 ಜಮೀನಿನ ಚಾಸಾ 1 ಮತ್ತು 2ರವರ ಜಮೀನಿನಲ್ಲಿ ಕುರಿ ಮತ್ತು ಹಸುವನ್ನು ಮೇಯಿಸಲು ಹೋದಾಗ ಜಗಳ ಆಗಿರುವ ಸಂಬಂಧ ದಿನಾಂಕ 09.06.2023 ರಂದು ಬೆಳಿಗ್ಗೆ 11.00 ರಿಂದ 12.00 ಗಂಟೆ ಸಮಯದಲ್ಲಿ ಮಹಜರನ್ನು ಜರುಗಿಸಿರುತ್ತಾರೆ. ಆ ಸಮಯದಲ್ಲಿ ತಾನು, ಚಾಸಾ 5 ಮತ್ತು ಚಾಸಾ 2 ರವರು ಹಾಗೂ ಪೋಲಿಸರು ಇದ್ದರು. ಪಂಚನಾಮೆಯ ಸಮಯದಲ್ಲಿ ಪೋಲಿಸರು ದೊಣ್ಣೆಯನ್ನು ಜಪ್ತಿ ಪಡಿಸಿಕೊಂಡು ತನ್ನ ಹಾಗೂ ಚಾಸಾ 5ರವರ ಸಹಿ ಪಡೆದಿರುತ್ತಾರೆಂದು ಸಾಕ್ಷಿ ನುಡಿದಿದ್ದು ಈ ಬಗ್ಗೆ ನೀವು ಏನು ಹೇಳುವಿರಿ?

**ಆರೋಪಿ ಉತ್ತರ :**

**ಪ್ರಶ್ನೆ-10 :** ಪ್ರಾಸಾ-**05 : ಸತೀಶ್ ರವರು** ತಮ್ಮ ಸಾಕ್ಷ್ಯದಲ್ಲಿ ದಿನಾಂಕ 06.06.2023 ರಂದು ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ತಾನು, ಚಾಸ 1 ಮತ್ತು 4ರವರು ಆಡನ್ನು ತಮ್ಮ ಜಮೀನಿನಲ್ಲಿ ಮೇಯಿಸುತ್ತ ಕೂತಿದ್ದೆವು, ಆಗ ಆರೋಪಿಯು ಬಂದು ಯಾರು ಆಡನ್ನು ಮೇಯಿಸುವುದು ಎಂದು ಕೇಳಿದರು. ಆರೋಪಿಯು ನಿಮ್ಮದು ಇಲ್ಲಿ ಏನೂ ಇರುವುದಿಲ್ಲ ಮೇಯಿಸಲು, ಆಚೆ ನಡೆಯಿರಿ ಎಂದು ಹೇಳಿದರು. ಆರೋಪಿಯು ಚಾಸಾ 1 ರವರಿಗೆ ದೊಣ್ಣೆಯಿಂದ ತಲೆ ಮತ್ತು ಮೈಕೈಗೆ ಹಲ್ಲೆ ಮಾಡಿರುತ್ತಾರೆ. ನಂತರ ತಾವು ಏಕೆ ಹಲ್ಲೆ ಮಾಡುತ್ತಿದ್ದೀರಿ ಎಂದು ಕೇಳಿದ್ದಕ್ಕೆ ತನ್ನ ತಾಯಿಯವರಾದ ಚಾಸಾ 2 ರವರಿಗೂ ಹಲ್ಲೆ ಮಾಡಿರುತ್ತಾರೆ. ನಂತರ ತಾವು ಕಿರುಚಾಡುತ್ತಾ ರೋಡಿಗೆ ಬಂದಿರುತ್ತೇವೆ. ನಂತರ ಚಾಸಾ 1 ರವರನ್ನು ಆಸ್ಪತ್ರೆಗೆ ಸೇರಿಸಿರುತ್ತೇವೆ. ನಂತರ ಚಾಸಾ 1ರವರು

ದೂರನ್ನು ಕೊಟ್ಟಿರುತ್ತಾರೆ. ಪೋಲಿಸರು ತನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತಾರೆ ಎಂದು ಸಾಕ್ಷಿ ನುಡಿದಿದ್ದು ಈ ಬಗ್ಗೆ ನೀವು ಏನು ಹೇಳುವಿರಿ?

**ಆರೋಪಿ ಉತ್ತರ :**

**ಪ್ರಶ್ನೆ-11 :** ಪ್ರಾಸಾ-**06ವಿಶಾಲ್ ಗೌಡ ರವರು** ತಮ್ಮ ಸಾಕ್ಷ್ಯದಲ್ಲಿ ದಿನಾಂಕ 06.06.2023 ರಂದು ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ತಾನು, ಚಾಸ 1 ಮತ್ತು 3 ರವರು ಆಡನ್ನು ತಮ್ಮ ಜಮೀನಿನಲ್ಲಿ ಮೇಯಿಸುತ್ತ ಇದ್ದೆವು, ಆಗ ಆರೋಪಿಯು ಬಂದು ಯಾರು ಆಡನ್ನು ಮೇಯಿಸುವುದು ಎಂದು ಕೇಳಿದರು. ತಾವು ಆರೋಪಿಗೆ ತಾವು ಮೇಯಿಸುತ್ತಿದ್ದೇವೆ ಎಂದು ಹೇಳಿದ್ದೆವು ಅಗ ಆರೋಪಿಯು ನೀವು ಇಲ್ಲಿ ಏಕೆ ಮೇಯಿಸುತ್ತಿದ್ದೀರಿ ಎಂದು ಕೇಳಿದರು ಆಗ ತಾವು ತಮ್ಮ ಭಾಗಕ್ಕೆ ಜಮೀನನ್ನು ಕೊಡಿ ಇಲ್ಲೆ ಮೇಯಿಸುತ್ತೇವೆ ಎಂದು ಹೇಳಿರುತ್ತೇವೆ. ಆಗ ಆರೋಪಿಯು ಆಡುಗಳನ್ನು ಹೊಡೆದುಕೊಂಡು ಹೋಗಿ ಎಂದು ಹೇಳಿದರು. ಆಗ ಚಾಸಾ 1ರವರು ತಮಗೆ ಭಾಗ ಕೊಡಿ ಎಂದು ಕೇಳಿದರು, ಆಗ ಆರೋಪಿಯು ಭಾಗ ಏಕೆ ಕೊಡಬೇಕು ನೀವು ಇದ್ದರೆ ತಾನೆ ಭಾಗ ಕೇಳುವುದು ಎಂದು ದೊಣ್ಣೆಯಿಂದ ಹಲ್ಲೆ ಮಾಡಿರುತ್ತಾರೆಂದು ನುಡಿದಿದ್ದು ಈ ಬಗ್ಗೆ ನೀವು ಏನು ಹೇಳುವಿರಿ?

**ಆರೋಪಿ ಉತ್ತರ :**

**ಪ್ರಶ್ನೆ-12 :** ಪ್ರಾಸಾ-**06 ರವರು ಮುಂದುವರೆದು** ತಮ್ಮ ಸಾಕ್ಷ್ಯದಲ್ಲಿ ಆರೋಪಿಯು ಚಾಸಾ 1 ರವರ ತಲೆಗೆ ಮತ್ತು ಮೈಕೈ ಗೆ ಹಲ್ಲೆ ಮಾಡುತ್ತಿದ್ದರು. ಆಗ ತನ್ನ ತಾಯಿ ಬಂದು ಆರೋಪಿಗೆ ಏಕೆ ಹಲ್ಲೆ ಮಾಡುತ್ತಿದ್ದೀರಿ ಎಂದು ಕೇಳಿದ್ದಕ್ಕೆ ಆರೋಪಿಯು ತನ್ನ ತಾಯಿಯ ತಲೆಗೆ ಮತ್ತು ಮೈಕೈಗೆ ಹಲ್ಲೆ ಮಾಡಿರುತ್ತಾರೆ. ನಂತರ ತಾವು ಏಕೆ ಹೊಡೆಯುತ್ತೀರಿ ಎಂದು ಕಿರುಚಾಡುತ್ತಿದ್ದಾಗ ತಮಗೂ ಕಲ್ಲಿನಿಂದ ಹೊಡೆಯಲು ಬಂದರು. ನಂತರ ತಾವು ತನ್ನ ತಂದೆಗೆ ಪೋನ್ ಮಾಡಿದೆವು. ನಂತರ ತನ್ನ ತಂದೆ ಮತ್ತು ಅವರ ಸ್ನೇಹಿತರು ಬಂದರು. ನಂತರ ಚಾಸಾ 1 ಮತ್ತು 2 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇವೆ. ಪೋಲಿಸರು ತನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತಾರೆಂದು ಎಂದು ಸಾಕ್ಷಿ ನುಡಿದಿದ್ದು ಈ ಬಗ್ಗೆ ನೀವು ಏನು ಹೇಳುವಿರಿ?

**ಆರೋಪಿ ಉತ್ತರ :**

**ಪ್ರಶ್ನೆ-13 :** ಪ್ರಾಸಾ-**07 : ಡಾಃ ಅಭಿಜಿತ್ ರವರು** ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 06-06-2023 ರಂದು ಸುಮಾರು ಮಧ್ಯಾಹ್ನ 2.44 ರ ಸಮಯದಲ್ಲಿ ಗೌರಮ್ಮ ಕೋಂ ನಿಂಗಯ್ಯ, 35 ವರ್ಷ, ಉಡುವೆಗೆರೆ ಇವರು ನಿಂಗಯ್ಯ ಎಂಬುವರೊಂದಿಗೆ ನಿಂಗಯ್ಯ ಎಂಬುವರು ದೊಣ್ಣೆಯಿಂದ ಹಲ್ಲೆ ಮಾಡಿರುತ್ತಾರೆ ಎಂದು ಚಿಕಿತ್ಸೆಗಾಗಿ ಬಂದಿದ್ದು, ಸದರಿಯವರನ್ನು ವೈದ್ಯಕೀಯ ತಪಾಸಣೆ ಮಾಡಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ. ಸದರಿಯವರರಿಗೆ

1. Right elbow 2 X 1 C.M. with bleeding.
2. Contusion over head 4 X 3 C.M.
3. Abrasion on left knee 3 X 2 C.M.
4. Abrasion near Clavicle left side in & around neck 3 X 2C.M.

ಗಾಯ ಕಂಡು ಬಂದಿರುತ್ತದೆ ಎಂದು ಸಾಕ್ಷಿ ನುಡಿದಿದ್ದು ಈ ಬಗ್ಗೆ ನೀವು ಏನು ಹೇಳುವಿರಿ?

**ಆರೋಪಿ ಉತ್ತರ :**

**ಪ್ರಶ್ನೆ-14 : ಪ್ರಾಸಾ-07 ರವರು ಮುಂದುವರೆದು** ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 06-06-2023 ರಂದು ಸುಮಾರು ಮಧ್ಯಾಹ್ನ 2.34 ರ ಸಮಯದಲ್ಲಿ ಕೆಂಪಮ್ಮ ಕೋಂ ಚಿಕ್ಕಬಸವಯ್ಯ, 72 ವರ್ಷ, ಉಡುವೆಗೆರೆ ಇವರು ನಿಂಗಯ್ಯ ಎಂಬುವರೊಂದಿಗೆ ನಿಂಗಯ್ಯ ಎಂಬುವರು ದೊಣ್ಣೆಯಿಂದ ಹಲ್ಲೆ ಮಾಡಿರುತ್ತಾರೆ ಎಂದು ಚಿಕಿತ್ಸೆಗಾಗಿ ಬಂದಿದ್ದು, ಸದರಿಯವರನ್ನು ವೈದ್ಯಕೀಯ ತಪಾಸಣೆ ಮಾಡಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ. ಸದರಿಯವರಿಗೆ

1. Lacerated Wound on Right Temporal Area measuring 3 X 2 C.M. bleeding.
2. Lacerated Wound on occipital area measuring 3 X 2 C.M. bleeding ಗಾಯಗಳು ಕಂಡು ಬಂದಿರುತ್ತದೆ.

ತನ್ನ ಅಭಿಪ್ರಾಯದಲ್ಲಿ ಮೇಲೆ ಹೇಳಿದ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತದೆ. ಎಂದು ಸಾಕ್ಷಿ ನುಡಿದಿದ್ದು ಈ ಬಗ್ಗೆ ನೀವು ಏನು ಹೇಳುವಿರಿ?

**ಆರೋಪಿ ಉತ್ತರ :**

**ಪ್ರಶ್ನೆ-15 : ಪ್ರಾಸಾ-08 ಕೃಷ್ಣಪ್ಪ ರವರು** ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 07-06-2023 ರಂದು ತಾನು ಠಾಣಾ ಪ್ರಭಾರದಲ್ಲಿರುವಾಗ ಮಧ್ಯಾಹ್ನ 12 ಗಂಟೆಯ ಸಮಯದಲ್ಲಿ ಮಾಗಡಿ ಸರ್ಕಾರಿ ಆಸ್ಪತ್ರೆಯಿಂದ ಬಂದ ಮೆಮೋವನ್ನು ಪರಿಶೀಲಿಸಿದಾಗ್ಯೂ ಮಾಗಡಿ ತಾಲ್ಲೂಕು ಉಡುವೆಗೆರೆ ಗ್ರಾಮದ ಕೆಂಪಮ್ಮ ಎಂಬುವರು ಗಾಯಗಳಾಗಿ ಚಿಕಿತ್ಸೆ ಪಡೆಯುತ್ತಿರುವುದಾಗಿ ತಿಳಿದಿರುತ್ತದೆ. ನಂತರ ತಾನು ಮಾಗಡಿ ಸರ್ಕಾರಿ ಆಸ್ಪತ್ರೆಗೆ ಹೋಗಿ ಅಲ್ಲಿನ ವೈದ್ಯಾಧಿಕಾರಿಯವರಿಗೆ ಕೆಂಪಮ್ಮನವರು ಹೇಳಿಕೆ ಕೊಡುವ ಸ್ಥಿತಿಯಲ್ಲಿ ಇದ್ದರೋ ಅಥವಾ ಇಲ್ಲವೋ ಎಂದು

ತಿಳಿದುಕೊಳ್ಳಲು ಮನವಿಪತ್ರವನ್ನು ನೀಡಿರುತ್ತೇನೆ. ಆಗ ಅಲ್ಲಿನ ವೈದ್ಯಾಧಿಕಾರಿಗಳು ಸದರಿ ಕೆಂಪಮ್ಮ ನವರು ಹೇಳಿಕೆ ಕೊಡುವ ಸ್ಥಿತಿಯಲ್ಲಿ ಇದ್ದಾರೆಂದು ತಿಳಿಸಿರುತ್ತಾರೆ. ಅದರಂತೆ ತಾನು ಸದರಿ ಕೆಂಪಮ್ಮನವರ ಹೇಳಿಕೆಯನ್ನು ವೈದ್ಯಾಧಿಕಾರಿಯವರ ಸಮಕ್ಷಮ ಪಡೆದುಕೊಂಡು ಮಧ್ಯಾಹ್ನ 1 ಗಂಟೆಗೆ ಠಾಣೆಗೆ ಬಂದು ಠಾಣಾ ಮೊಕದ್ದಮ್ಮೆ ಸಂ-120/2023 ರಂತೆ ಕಲಂ-323 324 504 506 ರ ಐಪಿಸಿ ರೀತ್ಯಾ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿದಿದ್ದು ಈ ಬಗ್ಗೆ ನೀವು ಏನು ಹೇಳುವಿರಿ?

**ಆರೋಪಿ ಉತ್ತರ :**

**ಪ್ರಶ್ನೆ-16: ಪ್ರಾಸಾ-08ರವರು ಮುಂದುವರೆದು** ತಮ್ಮ ಸಾಕ್ಷ್ಯದಲ್ಲಿ ಅದೇ ದಿವಸ ಆರೋಪಿಯನ್ನು ದಸ್ತಗಿರಿ ಕ್ರಮ ಅನುಸರಿಸಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿನಾಂಕಃ 09-06-2023 ಕೃತ್ಯಸ್ಥಳದ ಪಂಚನಾಮೆಗಾಗಿ ಮಾನ್ಯ ಮಾಗಡಿ ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಯವರಿಗೆ ಮನವಿಪತ್ರ ನೀಡಿ ಚಾಸಾ-2ರವರನ್ನು ಕೃತ್ಯ ನಡೆದ ಸ್ಥಳಕ್ಕೆ ಕರೆದುಕೊಂಡು ಹೋಗಿ ಚಾಸಾ-5 ಮತ್ತು 6 ರವರ ಸಮಕ್ಷಮ ಬೆಳಿಗ್ಗೆ 11 ರಿಂದ 12 ಗಂಟೆಯವರೆಗೆ ಕೃತ್ಯ ಸ್ಥಳದ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಪಂಚನಾಮೆಯ ಕಾಲದಲ್ಲಿ ಚಾಸಾ-2 ರವರು ಒಂದು ನೀಲಗಿರಿ ದೊಣ್ಣೆಯನ್ನು ಹಾಜರು ಪಡಿಸಿದ್ದು ಅದನ್ನು ಪರಿಶೀಲಿಸಲಾಗಿ ಸದರಿ ದೊಣ್ಣೆಯು ಮೂರುವರೆ ಅಡಿ ಉದ್ದದ ನೀಲಗಿರಿದೊಣ್ಣೆ ಆಗಿತ್ತು. ಸದರಿ ದೊಣ್ಣೆಯನ್ನು ಮುಂದಿನ ತನಿಖೆಗಾಗಿ ಅಮಾನತು ಪಡಿಸಿಕೊಂಡಿರುತ್ತೇನೆಂದು ಸಾಕ್ಷಿ ನುಡಿದಿದ್ದು ಈ ಬಗ್ಗೆ ನೀವು ಏನು ಹೇಳುವಿರಿ?

**ಆರೋಪಿ ಉತ್ತರ :**

**ಪ್ರಶ್ನೆ-17 : ಪ್ರಾಸಾ-08 ರವರು ಮುಂದುವರೆದು** ತಮ್ಮ ಸಾಕ್ಷ್ಯದಲ್ಲಿ ದಿನಾಂಕ 10-06-2023 ರಂದು ಚಾಸಾ-2 ರಿಂದ 4 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿಃ 26-07-2023 ರಂದು ಚಾಸಾ-1 ಮತ್ತು 2 ರವರ ಗಾಯದ ಪ್ರಮಾಣಪತ್ರವನ್ನು ಚಾಸಾ-7 ರವರಿಂದ ಪಡೆದುಕೊಂಡಿರುತ್ತೇನೆ ಮತ್ತು ಅದೇ ದಿವಸ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದು ಸಾಕ್ಷಿ ನುಡಿದಿದ್ದು ಈ ಬಗ್ಗೆ ನೀವು ಏನು ಹೇಳುವಿರಿ?

**ಆರೋಪಿ ಉತ್ತರ :**

**ಪ್ರಶ್ನೆ-18 :** ನೀವು ಹೇಳುವುದು ಏನಾದರೂ ಇದೆಯೇ ?
**ಆರೋಪಿ ಉತ್ತರ :**

**ಪ್ರಶ್ನೆ-19 :** ನಿಮ್ಮ ಪರವಾಗಿ ಸಾಕ್ಷಿದಾರರ ವಿಚಾರಣೆ ಮಾಡಿಸುತ್ತೀರಾ ?
**ಆರೋಪಿ ಉತ್ತರ :**

( ಈ ಮೇಲ್ಕಂಡ ಆರೋಪಿತನ ಹೇಳಿಕೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ನನ್ನ ಸಮಕ್ಷಮ ದಿನಾಂಕಃ 26.02.2026 ರಂದು ಸಹಿ ಮಾಡಿರುತ್ತಾರೆ )

ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು
ಜೆಎಂಎಫ್‌ಸಿ ನ್ಯಾಯಾಲಯ, ಮಾಗಡಿ.

**ಆರೋಪಿ ಸಹಿ :**